ಮಾಡಿರುವ ಒಟ್ಟು ಹಣಕ್ಕೆ ಉಪಯೋಗಿತಾ ಪತ್ರವನ್ನು ನೀಡಿರುತ್ತದೆ. ಇದನ್ನು ಕೇಂದ್ರ ಸರ್ಕಾರಕ್ಕೆ ಇಲಾಖೆಯು ಸಲ್ಲಿಸಿದ್ದು, ಕೇಂದ್ರದಿಂದ ಮುಂದಿನ ಕಂತು ಬಿಡುಗಡೆ ನಿರೀಕ್ಷಿಸಲಾಗಿದೆ. ಒಟ್ಟಾರೆ ಕರ್ನಾಟಕ ಭೂ ಸೇನಾ ನಿಗಮಕ್ಕೆ ನೀಡಬೇಕಾಗಿರುವ ಬಾಕಿ ಮೊತ್ತವು ರೂ. 5. 39 ಲಕ್ಷಗಳು ಮಾತ್ರ.

ರಾಜ್ಯದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡಾಂಗಣ ನಿರ್ಮಾಣ.

1525(1793)

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ನಗರ ಪ್ರದೇಶಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟು ಕ್ರೀಡಾಂಗಣಗಳನ್ನು ಕಟ್ಟಲಾಗುತ್ತಿದೆ?

ಆ) ಇವುಗಳಿಗೆ ಕೇಂದ್ರ ಸರ್ಕಾರದ ನೆರವು ಪಡೆಯಲಾಗಿದೆಯೆ; ಪಡೆಯದಿದ್ದಲ್ಲಿ ಕಾರಣ ನೀಡುವುದು?

ಇ) ಬೆಳಗಾಂವ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಕಟ್ಟಲಾಗುತ್ತಿರುವ ಕ್ರೀಡಾಂಗಣಕ್ಕೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಜಿಲ್ಲಾ ಪಂಚಾಯತ್ ಹಾಗೂ ಸಾರ್ವಜನಿಕರಿಂದ ವಂತಿಗೆ ಕೊಡಿಸಿದ ಹಣವನ್ನು ಖರ್ಚು ಮಾಡಿದ ದಾಖಲೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸದೇ ಇದ್ದದ್ದರಿಂದ ಕೇಂದ್ರ ಸರ್ಕಾರ ತನ್ನ ವಂತಿಗೆಯನ್ನು ಬಿಡುಗಡೆ ಮಾಡದೇ ಇರುವ ಸಂಗತಿ ನಿಜವೇ?

ಈ) ಹಾಗಿದ್ದಲ್ಲಿ, ರಾಜ್ಯ ಸರ್ಕಾರ ಹಣ ಖರ್ಚು ಮಾಡಿದ ದಾಖಲೆಯನ್ನು ಕೇಂದ್ರ ಸರ್ಕಾರಕ್ಕೆ (ಯುಟಿಲೈಜೇಶನ್ ಸರ್ಟಿಫಿಕೇಟ್) ಕಳುಹಿಸಿ ಕೊಡಲಾಗುವುದೇ?

ಉ) ಈಗಾಗಲೇ ಕಳುಹಿಸಿದ್ದಲ್ಲಿ ಎಷ್ಟು ಮೊತ್ತಕ್ಕೆ ಹಾಗೂ ಎಂದು ಕಳುಹಿಸಿಕೊಡಲಾಗಿದೆ. ಎಂಬ ವಿವರ ನೀಡುವುದು?

ಊ) ಈ ಕ್ರೀಡಾಂಗಣದ ಕಾಮಗಾರಿಯನ್ನು ಪೂರ್ಣ ಮುಗಿಸಲು ಸರ್ಕಾರ ಕೈಗೊಂಡ ಕ್ರಮವೇನು? ವಿವರ ನೀಡುವುದು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್(ಯುವಜನ ಸೇವೆಗಳು ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) 92

ಆ) ಕೇಂದ್ರ ಸರ್ಕಾರದ ನೆರವು 16 ಕ್ರೀಡಾಂಗಣಗಳಿಗೆ ಪಡೆಯಲಾಗಿದೆ.

ಇ) ಹೌದು.

ಈ) ಕಳುಹಿಸಿಕೊಡಲು ಸಾಧ್ಯವಾಗುವುದಿಲ್ಲ. ಏಕೆಂದರೆ, ಕೇಂದ್ರ ಸರ್ಕಾರದವರು ನಿಗಧಿಪಡಿಸಿರುವ ಅವಧಿ ಮುಗಿದಿರುವ ಕಾರಣ ಈಗ ಕಳುಹಿಸಿದರೆ ತಿರಸ್ಕೃತವಾಗುತ್ತದೆ.

ಉ) ಇಲ್ಲ.

ಊ) ಕೇಂದ್ರ ಸರ್ಕಾರದ ಅನುದಾನ ಪಡೆಯಲು ಪ್ರಸ್ತಾವನೆ ಪುನಃ ಕಳುಹಿಸಲು ಕ್ರಮ ಕೈಗೊಳ್ಳಲಾಗುವುದು.

ರಾಣೆಬೆನ್ನೂರು ಮತ್ತು ಹಾವೇರಿ ನಗರಗಳ ಬೈಪಾಸ್ ರಸ್ತೆ.

1527(2175)

ಶ್ರೀ ಕೋಳಿವಾಡ್ ಕೃಷ್ಣಪ್ಪ . ಭೀಮಪ್ಪ (ರಾಣೆಬೆನ್ನೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ಮತ್ತು ಹಾವೇರಿ ನಗರಗಳ ಬೈಪಾಸ್ ರಸ್ತೆಯನ್ನು ಜೂನ್ ತಿಂಗಳಿನಿಂದ ಪ್ರಾರಂಭಿಸಲಾಗುವುದೆಂದು ಸದನದಲ್ಲಿ ಹೇಳಿಕೆ ಕೊಟ್ಟಿದ್ದು, ಇಲ್ಲಿಯವರೆಗೂ ಪ್ರಾರಂಭ ಆಗದಿರಲು ಕಾರಣಗಳೇನು?

ಆ) ಯಾವ ತಿಂಗಳಿನಿಂದ ಈ ಕೆಲಸವನ್ನು ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಪ್ರಸ್ತುತ ಬೈಪಾಸ್ ರಸ್ತೆಗಳನ್ನು ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಯೋಜನೆಯಲ್ಲಿ ಅಭಿವೃದ್ಧಿಪಡಿಸಲು ಭಾರತೀಯ ಹೆದ್ದಾರಿ ಪ್ರಾಧಿಕಾರ, ದೆಹಲಿ ಯೋಜಿಸಿದ್ದು, ವಿದೇಶಿ ನೆರವಿನ ಯೋಜನೆಗೆ ವಿಧಾನಗಳನ್ನು ಇನ್ನೂ ತಯಾರಿಸಲಾಗುತ್ತಿರುವುದರಿಂದ ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುವುದಿಲ್ಲ.

ಆ) ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಅನುಮೋದನೆ ದೊರೆತ ನಂತರ, ಹಾಗೂ ಗುತ್ತಿಗೆಗಳನ್ನು ನಿಗಧಿ ಮಾಡಿದ ನಂತರ ಡಿಸೆಂಬರ್ 2001ರಲ್ಲಿ ಕೆಲಸ ಪ್ರಾರಂಭಿಸಲು ಪ್ರಾಧಿಕಾರವು ಯೋಜಿಸಿದೆ.